Government of Karnataka

Deposition Sheet Form No. R.P. 57

ಸಿ.ಸಿ.ನಂ. 877/2023

ಸಿ.ಡಬ್ಲೂ-08

ಪಿ.ಡಬ್ಲೂ-05

| | | |
|---|---|---|
| ಸಾಕ್ಷಿದಾರರ ಹೆಸರು | :- | ಡಾ.ದಿಗಂಬರ್ |
| ತಂದೆಯ ಹೆಸರು | :- | ಭಗಂವತಪ್ಪ |
| ವಯಸ್ಸು | :- | 54 ವರ್ಷ |
| ಉದ್ಯೋಗ | :- | ವೈದ್ಯರು, ಸರ್ಕಾರಿ ಆಸ್ಪತ್ರೆ ಮುದ್ದೇಬಿಹಾಳ |
| ವಾಸಸ್ಥಳ | :- | ಮುದ್ದೇಬಿಹಾಳ |

ದಿನಾಂಕ 12-08-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆ : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:-**

ನಾನು 2005 ರಿಂದ ಜುಲೈ-2025 ವೈದ್ಯಾಧಿಕಾರಿಯಾಗಿ ಲಿಂಗಸುಗೂರಿನ ಸಾರ್ವಜನಿಕ ಆಸ್ಪತ್ರೆಯಲ್ಲಿ ಕಾರ್ಯ ನಿರ್ವಹಿಸಿದ್ದೇನೆ.

ದಿನಾಂಕ 11-06-2023 ರಂದು ಬೆಳಿಗ್ಗೆ 10-30 ಗಂಟೆಗೆ ನಾನು ಕರ್ತವ್ಯದಲ್ಲಿದ್ದಾಗ ಚಾ.ಸಾ-4 ಮತ್ತು 5 ರವರು ಹಲ್ಲೆಯ ಹಿನ್ನಲೆಯಲ್ಲಿ ಚಿಕಿತ್ಸೆಗಾಗಿ ನನ್ನ ಮುಂದೆ ಹಾಜರಾಗಿದ್ದರು. ನಾನು ಅವರನ್ನು ಪರೀಕ್ಷಿಸಿರುತ್ತೇನೆ.

2. ಚಾ.ಸಾ-4 ಅವರಿಗೆ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತವೆ. ಎಡಗಡೆ ಹಣೆಯ ಮೇಲೆ 3 * 1 ಸೆ.ಮಿ ನ ತೆರಚಿದ ಗಾಯ ಕಂಡು ಬಂದಿರುತ್ತದೆ. ಈ ಕುರಿತು ಸಾದಾ ಸ್ವರೂಪದ ಗಾಯ ಎಂದು ಅಭಿಪ್ರಾಯ ಪಟ್ಟಿರುತ್ತೇನೆ. ಈ ಕುರಿತು ನಾನು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ.

3. ಚಾ.ಸಾ-5 ಅವರಿಗೆ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತವೆ. ಬಲ ಪಾದದ ಮೇಲೆ 2 * 3 ಸೆ.ಮಿ ನ ತೆರಚಿದ ಗಾಯ ಕಂಡು ಬಂದಿರುತ್ತದೆ. ಈ ಕುರಿತು ಸಾದಾ ಸ್ವರೂಪದ ಗಾಯ ಎಂದು ಅಭಿಪ್ರಾಯ ಪಟ್ಟಿರುತ್ತೇನೆ. ಈ ಕುರಿತು ನಾನು ಗಾಯದ ಪ್ರಮಾಣ ಪತ್ರವನ್ನು

ನೀಡಿರುತ್ತೇನೆ.  ಸಾಕ್ಷಿ ಗಾಯದ ಪ್ರಮಾಣ ಪತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿ.ಪಿ-2 ಮತ್ತು 3 ಎಂದು,  ಸಾಕ್ಷಿಯ ಸಹಿಗಳನ್ನು ನಿ.ಪಿ-2(ಎ) ಮತ್ತು ನಿ.ಪಿ-3(ಎ) ಎಂದು ಗುರುತಿಸಲಾಯಿತು.  ಸದರಿ ಗಾಯಗಳು ಜೋರಾಗಿ ಕಾಲಿನಿಂದ ಒದ್ದರೆ ಮತ್ತು ಜೋರಾಗಿ ಕೈಯಿಂದ ಗುದ್ದಿದ್ದರೆ  ಆಗುವ ಸಾದ್ಯತೆ ಇದೆ.

**ಪಾಟೀ ಸವಾಲು ಶ್ರೀ. ಹೆಚ್.ವೈ ವಕೀಲರಿಂದ :-**

ನಿ.ಪಿ-2 ಮತ್ತು 3 ರಲ್ಲಿರುವ ಗಾಯಗಳು ಸಾಮಾನ್ಯವಾಗಿ ಒಬ್ಬ ವ್ಯಕ್ತಿ ಗಟ್ಟಿಯಾದ ವಸ್ತುವಿನ ಮೇಲೆ ಬಿದ್ದರೆ ಆಗುವ ಸಾದ್ಯತೆ ಇದೆ ಎಂದರೆ ಸರಿ.  ಎರಡೂ ಗಾಯದ ಪ್ರಮಾಣ ಪತ್ರಗಳಲ್ಲಿ ಗಾಯದ ವಯಸ್ಸನ್ನು ನಮೂದಿಸಿಲ್ಲ ಎಂದರೆ ಸರಿಯಲ್ಲ.  ನಾನು ಚಾ.ಸಾ-4 ಮತ್ತು 5 ರವರಿಗೆ ಯಾವುದೇ ತಪಾಸಣೆ ಮಾಡಿಲ್ಲ ಪೋಲಿಸರ ಕೋರಿಕೆಯ ಮೇರೆಗೆ ನಾನು ಗಾಯದ ಪ್ರಮಾಣ ಪತ್ರ ನೀಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ :-**

ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,
ಲಿಂಗಸುಗೂರು.